ಅಧ್ಯಕ್ಷರು.—ಇವತ್ತು ಕಡೇ ದಿವಸ. ನಾವೆಲ್ಲಾ ನಗುತ್ತಾ ಹೋಗೋಣ. ಇವತ್ತು ಸದನದ ಸಮಿತಿಗಳನ್ನು, ಮತ್ತೊಂದು ಸದನದ ಸಮಿತಿಯನ್ನು ಫಾರಂ ಮಾಡಬೇಕಾಗಿದೆ.

(ಗೊಂದಲ)

೯–೩೦ ಎ. ಎಂ.

ವರದಿಗಳನ್ನೊಪ್ಪಿಸುವುದು

ಅಧ್ಯಕ್ಷರು.—''ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಹನ್ನೊಂದನೆ ವರದಿಯನ್ನು'' ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು)ಅವರ ಪರವಾಗಿ ನಾನು ಮಂಡಿಸುತ್ತೇನೆ

ವಸತಿ ಸಮಿತಿಯ ಹನೇ ವರದಿಯನ್ನು ಸಹ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ).—ಮಾನ್ಯ ಅಧ್ಯಕ್ಷರೆ, ''ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಹತ್ತನೇ ವರದಿಯನ್ನು ಸಭೆಗ ಒಪ್ಪಿಸುತ್ತೇನೆ.

ಶ್ರೀ ಜೆ. ಎ. ಫರ್ನಾಂಡೀಸ್ (ಅಧ್ಯಕ್ಷರು, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ).—ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯ ಏಳನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಮಂಡಿಸಲಾಯಿತು. *

ಶಾಸನ ರಚನೆ ಕಾರ್ಯಕಲಾಪಗಳು

೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ''೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು'' ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾಪಕ್ಕೆ ಅನುಮತಿ ನೀಡಲಾಯಿತು.

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ''೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು'' ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಪ್ರಕಟಣೆ

ಜಮಖಂಡಿ ತಾಲ್ಲೂಕಿನ ಸವಳಗಿ ಗ್ರಾಮದಲ್ಲಿ ದಲಿತರ ಮೇಲೆ ನಡೆದ ಗೋಲಿಬಾರ್ ಪ್ರಕರಣದ ವಿಚಾರಣೆಗೆ ಸದನದ ಸಮಿತಿ ನೇಮಕ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''ಜಮಖಂಡಿ ತಾಲ್ಲೂಕು ಸಾವಳಗಿ ಗ್ರಾಮದ ತಂಡು ಜಮೀನಿನ ವಿವಾದ, ದಲಿತರು ಹಾಗೂ ಮುಂದುವರೆದ ಜನರ ಜಗಳ ಹಾಗದ ಪೋಲೀಸ್ ಗೋಲೀಬಾರ್ ಪ್ರಕರಣಕ್ಕೆ

* Annexure 1